ಹಾಸನ ಸಬ್ ಡಿವೀರ್ಜ್ ಆಫೀಸ್.

ತಾರೀಖು 14ನೇ ಏಪ್ರಿಲ್ 1884.

ಹಾಸನ ಸಬ್ ಡಿವೀರ್ಜ್‌ಲೂರು ತಾಲ್ಲೂಕು ಸಬ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟ್ರಾದ ಯರಡು ವರುಷವಾದಾಗ್ಯೂ ವಾಪಸ್ ಪಡಿಯದೆ ಬಿಟ್ಟಿರುವ ಈ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಬೇಕಾಗಿರುವದರ ತಪಶೀಲ್ ಪಟ್ಟಿ.

ದಸ್ತಾವೇಜು ನಂಬರ್.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ	ರಿಜಿಸ್ಟ್ರೇಷನ್ ಬಗ್ಗೆ ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
59 ——— 1881—82	1 ನಿರವಾಣಿ ಗವ್ವಡನ ಮಗ ಮುದ್ದೇಗವ್ವಡ 2 ಕಿದ್ದೇಗವ್ವಡನ ಮಗ ರಂ ದ್ದೇಗವ್ವಡ ಅಡಗೂರು ವಾಸಸ್ಥರು ಶೇಲೂರು ತಾಲ್ಲೂಕು.	ಅಡಗೂರು ಶಾನುಭೋಗ ಸುಬ್ಬಯ್ಯನವರ ಮಗ ರಾಮಯ್ಯ.	16—1—82	17—1—82	ರುದ್ರೇಗವ್ವಡ ಮತ್ತು ಮುದ್ದೇಗವ್ವಡನ ಬಾಬತು 1 ಹಂಚಿನ ಮನೆ 161ನೇ ನಂ. ಹೊಲ 4ನೇ ನಂ. ಗದ್ದೆ 132ನೇ ನಂಬರ್ ಗುಂಡಿಗದ್ದೆ 101ನೇ ನಂ. ಮಳಲ ಗದ್ದೆ 103ನೇ ನಂ. ತಂಟೆದ ಗದ್ದೆ 154ನೇ ಗುಂಡಿ ಹೊಲ 189ನೇ ನಂ. ಮೂಡಗಡೆಯರೆ, ಈ ಜವಿನಾನುಗಳನ್ನು 1,000 ರೂ ಪಾಯಿಗೆ ಖರೀದಿಗೆ ಕೊಟ್ಟಿರುವದಾಗಿ.

ಟಿ. ಆನಂದರಾವ್,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶೇಲೂರು ತಾಲ್ಲೂಕು ಅರೇಪಳ್ಳಿ ಹೋಬಳಿ ಮಲ್ಲಾಪುರ ಮಠದಲ್ಲಿ ಇರುವ ಶಿವಾಚಾರದ ಮಲ್ಲಿಕಾರ್ಜುನ ವಡೆಯರ್ ಜಡ್ಜ್‌ಮೆಂಟ್ ಡೆಟರ್ ವಿಷಯದಲ್ಲಿ—

ಈ ವಿಷಯವು ಸಬಾರ್ಡಿನೇಟ್ ಜಡ್ಜ್ ಬಿ. ಶಿರುವಾಲಾಚಾರ್ಯರ ಕೂಬರೂ ದಿವಾಳಿಯಾದವನ ತರಫ" ಪ್ಲೀಡರ್ ವೆಂಕಟರಮಣಯ್ಯನವರ ಸಮಕ್ಷವದಲ್ಲಿಯೂ ಮತ್ತು ದಿವಾಳೀದಾರನ ಜೀತೇದಾರರಾದ 1 ರಾಮದಾಸಪ್ಪ, 2 ಲಬ್ಬೆ ಮಹಮ್ಮದಖನೀ, 3ನೇ ದೇವಪ್ಪ, 4ನೇ ಖಾಜಿ ಮಹಮ್ಮದಲ್ಲಿ, 5ನೇ ಸಿ. ಶ್ರೀನಿವಾಸಯ್ಯಂಗಾರ್, 6ನೇ ಪಟೇಲ್ ಬಸವೇಗೌಡ ಇವರ ಯದುರಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು.

ಮತ್ತು ಸ್ರ 1884ನೇ ಇಸವಿ ಏಪ್ರಿಲ್ 8ನೇ ತಾರೀಖಿನ ಬಾಬತು ರಿಸೀವರಾದ ನಂಜಪ್ಪನ ಸರಟಿಫಿಕೇಟ್ ಬದಲಾಯಿತು. ಇದೇ ವಿಷಯದಲ್ಲಿ ಸ್ರ 1884ನೇ ಇಸವಿ ಜನವರೀ 30ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟೀಯಲ್ಲಿ ಕಂಡ ಯಾವ ಸಾಲಗಾರಿಗೂ ಅರ್ಜಿ ದಿವಾಳೀಯಾದವನ್ನ ದುಲ್ಲಾ ಜವಾಬುದಾರಿಯಿಂದಲೂ ನಿಖಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದೆಸೆಯಿಂದಲೂ ಬಿಡಗಡೆಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ 1884ನೇ ಇಸವಿ ಏಪ್ರಿಲ್ ತಾರೀಖು 8ರಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿದೆ.

———

ತಾರೀಖು 8ನೇ ಏಪ್ರಿಲ್ 1884.

ಸ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ ಸರಟಿಫಿಕೇಟ್ ಕೊಟ್ಟದ್ದು ವಾಯಿದೆ ಪ್ರಕಾರ ಪ್ರಮಾಣ ಪತ್ರಿಕೆ ಹಾಜರ್ ಮಾಡದ್ದರಿಂದ ಸರಟಿಫಿಕೇಟ್ ರದ್ದುಮಾಡಿದ ಲಿಸ್ಟು